ಕಥೆ

# ಸ್ಮಾರ್ಟ್ ಸಿಟಿ ಮಾರೆಮ್ಮ



ನಿಂಗಪ್ಪ ಮುದೇನೂರು

ಕಲೆ: ವಿಶ್ವನಾಥ ಎ.ಎಸ್.

**ಉಧೋ ಉಧೋ**
**ನಿನ್ನಾಲ್ಕುಧೋ ಉಧೋ**
**ಎಲ್ಲಮ್ಮ ನಿನ್ನಾಲ್ಕುಧೋ ಉಧೋ**
**ಮಾರೆಮ್ಮ ನಿನ್ನಾಲ್ಕುಧೋ ಉಧೋ**
**ಅಕ್ಕ ಊರ ದುರಗಮ್ಮ ನಿನ್ನಾಲ್ಕುಧೋ ಉಧೋ...**

ಆಈ ಊ ಐ. ಓ ಆಕ್ಷೀ..., ಲೇ ಮಕ್ಕಳೇ, ಮಾತಾಡಿ ನಿಮ್ಮ ಕಷ್ಟ ಏನು ಬೇಡ್ಕೊಳ್ಳಿ.. ನಾ ನಿಮ್ಮ ತಾಯಿ ಇದೀನಿ ನಿಮ್ಮ ಸತ್ಯವತಿ ಇದೀನಿ. ತಪ್ಪು ಮಾಡಿದರೆ ಸುಟ್ಟ ಬಿಡ್ತೀನಿ ಅಂತಾ ಒಂದೇ ಸಮನೇ ಹಳೇ ಊರ ಮಾರೆಮ್ಮ ಬಡಬಡಿಸ್ತಾ ಇದ್ಲು. ಪೂಜಾರಪ್ಪನ ಬಾಯಲ್ಲಿ ಪುಂಖಾನುಪುಂಖವಾಗಿ ಬರುತ್ತಿದ್ದ ಈ ಮಾತುಗಳನ್ನು ಕೇಳಿದ ನಮ್ಮ ಹಳೇ ಊರಿನ ಭಕ್ತರು ಒಂದೇ ಸಮನೆ ಕುಂಡಿ ಸುಟ್ಟ ಬೆಕ್ಕಿನಂತೆ ಅದುರಿ ನಿಂತಿದ್ದರು. ಅದರಲ್ಲಿ ನಮ್ಮ ಕಿಡಿಗೇಡಿ ರಾಮಣ್ಣ ನಿಂತ ನಿಂತಲ್ಲೇ ಪ್ರಸಿದ್ಧಿಯಾದ. ಒಂದಿಷ್ಟು ಆ ಪಂಚಾಯತಿ, ಈ ಪಂಚಾಯತಿ ಅಂತಾ ಓಡಾಡಿಕೊಂಡಿದ್ದ ರಾಮಣ್ಣನಿಗೆ ಪೂಜಾರಪ್ಪನ ಮೈತುಂಬಿ ಬರುತ್ತಿದ್ದ ಆಶೀರ್ವಾದದ ಬೈಗುಳಗಳನ್ನು ಅಗೀಯಲಿಕ್ಕೆ ಆಗ್ತಾ ಇರ್ಲಿಲ್ಲ.

ಏನ ಮಾರೆಮ್ಮಾ, ನಿನಗ ದೆವ್ವ ಹಿಡದದ ಏನು? ಒಂದೇ ಸಮನ ಬಾಯ ಬಡಕಾನಕ ಹತ್ತಿ. ನನಗಾ ಹುಡುಗಾಟ ಆಡಾಕತ್ತಿ, ನಾವ್ರೋ ಏನೂ ಸತ್ಯವತಿ ಅದಾಳ, ಪರಿಸೆ ಮಾಡಬೇಕು, ನಿನ್ನ ಪಲ್ಲಕ್ಕಿ ಮ್ಯಾಲ ಮೆರವಣಿಗೆ ಮಾಡ್ಸಿ, ಕಾಯಿ ಲಿಂಬೆಹಣ್ಣು ತಂದು ಇಳೀತೆಗೆದು ಗರ್ಭಗುಡಿಗೆ ಹಾಕಬೇಕು ಅಂತ ಮಾಡಿದ್ನಿ, ನೀ ನೋಡಿದರ ನಮ್ಮನ್ನ ಗದರಸ್ತಿ. ಸುಟ್ಟ ಬಿಟ್ಟೇನ ಅಂತಿ. ಏನ್ ವೈ-ಫೈ ಮಾತಾಡಕ ಶುರುಮಾಡ್ಕಂಡೀ. ನಿನ್ನ ಗೂಗಲ್ ಆಕೌಂಟ್ ನೋಡಕಂಡಿಯಾ ಎಷ್ಟು ದುಡ್ಡು ಕಲೆಕ್ಟ್ ಆಗಿದೆ ಅಂತ. ಜಾತ್ರಿ ನೋಡಿದ್ರ ಹತ್ತಿರ ಬಂತು. ಇನ್ನು ನಿನ್ನ ಹುಂಡಿನಾ ತುಂಬಿಲ್ಲ. ನಾನ ಏನೋ ಕಷ್ಟ ಪಟ್ಟು ಊರವರನೆಲ್ಲಾ ಕೂಡ್ಸಿಕೊಂಡು ಇಲ್ಲಿ ಬಂದ್ರ ನೀನೂ ನಿಗರಾಡಕ ನಿಂತೀ ಎಂದವನೇ ಒಂದೇ ಉಸಿರಿನಲ್ಲಿ ಲಕ್ಷ್ಮೀಬಾಣ ಬಿಟ್ಟ ಹಾಗೆ ಝಾಡಿಸುತ್ತಿದ್ದ. ಇದು ಕಷ್ಟ ಆಯ್ತು ಅಂತ ತಿಳಿದ ನಮ್ಮ ಮಾರೆಮ್ಮ ತುಂಬ ಕೂಲ್ ಆಗಿ ಥಮ್ಸಪ್ ಕುಡಿದವರ ಹಾಗೆ ಬಾಯಾಗಿನ ಧೂಪ ಹೊರಗೆ ಹಾಕುತ್ತಾ ಗರ್ಭಗುಡಿಯ ಒಳಗೆ ಸೇರಿದ ಗಣೇಶ್ ಬೀಡಿ ಹೊಗೆಯೂ ಕೂಡಿ ವಿಶಿಷ್ಟ ಪರಿಮಳ ಹೊಮ್ಮಿ ಒಂದು ನಮೂನೆ ಘಾಟು ಗುಡಿಯ ತುಂಬೆಲ್ಲಾ ಆವರಿಸಿತು.

ಅಂತು ಮಾರೆಮ್ಮಾ ಎಚ್ಚರಾದವಳೇ ಏನ್ ಹೇಳ